ಓ.ಎಸ್‌ಃ 517/2021

ಪಿ.ಡಬ್ಲ್ಯೂಃ 03

**ದಿನಾಂಕಃ 24.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಸಿ.ಆರ್.ಎಸ್. ವಕೀಲರಿಂದಃ**

1. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕೂಡಗಿಯಲ್ಲಿ ವಾಸವಾಗಿರುತ್ತೇನೆ. ನನ್ನನ್ನು ನ್ಯಾಯಾಲಯಕ್ಕೆ ವಾದಿಯು ಕರೆದುಕೊಂಡು ಬಂದಿರುತ್ತಾನೆ. ದಾವೆಯ ಬಗ್ಗೆ ಮಾಹಿತಿ ಇರುತ್ತದೆ. ಸದರಿ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ದಾವೆ ಸಲ್ಲಿಸಿರುತ್ತಾರೆ. ದಾವೆಯನ್ನು ವಾದಿಯು ಮನೆಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿರುತ್ತಾರೆ. ಆಸ್ತಿ ನಂಬರ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚಕಬಂದಿ ಪಶ್ಚಿಮಕ್ಕೆ ರಸ್ತೆ ಮತ್ತು ನನ್ನ ಮನೆ, ಪೂರ್ವಕ್ಕೆ ವಾದಿಯರ ಜಾಗ, ಉತ್ತರಕ್ಕೆ ವಾದಿಯ ಜಾಗ ಇರುತ್ತದೆ.

2. ಶಾರವ್ವ ಚೌದ್ರಿ ನನ್ನ ತಾಯಿ ಆಗಬೇಕು. ದಕ್ಷಿಣಕ್ಕೆ ಶಾರವ್ವ ಚೌದ್ರಿ ರವರ ಆಸ್ತಿ ಇರುತ್ತದೆ. ವಾದಿಯ ಕುಟುಂಬದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನಂ.678 ಯಾರ ಆಸ್ತಿ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿ ಯಾರು ಯಾರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಮನೆ ಇರುತ್ತದೆ. ಸದರಿ ಮನೆಯಲ್ಲಿ ಪ್ರತಿವಾದಿಯರು ವಾಸವಾಗಿರುತ್ತಾರೆ. ಸದರಿ ಮನಯಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ನೋಡಿದಾಗಿನಿಂದಲೂ ಪ್ರತಿವಾದಿಯರು ವಾಸವಾಗಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಹಳೆ ಮನೆ ಇದ್ದು ಅದನ್ನು ಪ್ರತಿವಾದಿಯರು ಬಿಚ್ಚಿ ಕಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿಯು ಮನೆ ಕಟ್ಟಡ ಕಟ್ಟುವಾಗ ವಾದಿಯು ತೊಂದರೆ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ.

3. ದಾವಾ ಆಸ್ತಿಯನ್ನು ವಾದಿಯ ಚಿಕ್ಕಪ್ಪ ಪ್ರತಿವಾದಿಯರಿಗೆ ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಕ್ಕು ಬಿಟ್ಟುಕೊಟ್ಟ ನಂತರ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ವಾದಿಯು ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಪ್ರಮಾಣ ಪತ್ರ ಬರೆಯಲು ನಾನು ಮಾಹಿತಿ ನೀಡಿರುವುದಿಲ್ಲ. ಅದರಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ. ಪ್ರತಿವಾದಿಗೆ ವಾದಿಯ ಚಿಕ್ಕಪ್ಪ ಆಸ್ತಿಯನ್ನು ಬಿಟ್ಟುಕೊಟ್ಟಿದ್ದು, ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ವಾದಿಯು

ಸುಳ್ಳು ದಾವೆ ಸಲ್ಲಿಸಿದ್ದು, ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**

**ದಿವಾಣಿ ನ್ಯಾಯಾಧೀಶರು ಮತ್ತು**

**ನ್ಯಾಯಿಕ ದಂಡಾಧಿಕಾರಿಗಳು**

**ಬಸವನ ಬಾಗೇವಾಡಿ.**